# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **651**

ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 12-03-2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 03 ವರ್ಷಗಳಲ್ಲಿ ರಾಜ್ಯದಲ್ಲಿ ತೆರೆದ ವಿದ್ಯುತ್ ತಂತಿಗಳಿಂದ/ ಇನ್ನಿತರೆ ವಿದ್ಯುತ್ ಅವಘಡಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ವಿದ್ಯುತ್ ಸರಬರಾಜು ಕಂಪನಿ ಮತ್ತು ಕ.ವಿ.ಪ್ರ.ನಿ.ನಿ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಗಳಿಂದ ಹಾಗೂ ಇನ್ನಿತರ ವಿದ್ಯುತ್ ಅವಘಡಗಳಿಂದ ಒಟ್ಟು 1,809 ವ್ಯಕ್ತಿಗಳು ಮೃತಪಟ್ಟಿರುತ್ತಾರೆ. |
| ಆ) | ಇಂತಹ ವಿದ್ಯುತ್ ಅವಘಡಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ವಿದ್ಯುತ್ ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ವಿದ್ಯುತ್ ಜಾಲದಲ್ಲಿನ ಅಪಾಯಕಾರಿ ಸ್ಥಳವನ್ನು ಗುರುತಿಸಿ ಅವುಗಳನ್ನು ಸರಿಪಡಿಸಲು ವಿದ್ಯುತ್ ಸರಬರಾಜು ಕಂಪನಿಗಳಿಂದ ಹಾಗೂ ಕ.ವಿ.ಪ್ರ.ನಿ.ನಿ. ವತಿಯಿಂದ ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಹಳೆಯ ಶಿಥಿಲಗೊಂಡ ಹೆಚ್.ಟಿ/ಎಲ್.ಟಿ ವಾಹಕವನ್ನು ಹಂತಹಂತವಾಗಿ ಬದಲಾಯಿಸುವುದು.<br>2. ಜೋತು ಬಿದ್ದ ಮಾರ್ಗಗಳಿಗೆ ಮಧ್ಯಂತರ ಕಂಬಗಳನ್ನು ಅಳವಡಿಸುವುದು.<br>3. ಹಳೆಯ ತುಕ್ಕು ಹಿಡಿದ ಕಂಬಗಳನ್ನು ಬದಲಾಯಿಸುವುದು.<br>4. ವಿದ್ಯುತ್ ವಿತರಣಾ ಮಾರ್ಗಗಳಿಗೆ ತಾಗುತ್ತಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವುದು.<br>5. ಎಲ್ಲಾ ಮಾರ್ಗದಾಳುಗಳಿಗೆ ಸುರಕ್ಷತಾ ಉಪಕರಣಗಳನ್ನು ನೀಡಿ, ಅವುಗಳನ್ನು ಕೆಲಸದ ವೇಳೆಯಲ್ಲಿ ಉಪಯೋಗಿಸಲು ಸೂಚಿಸಲಾಗಿದ್ದು, ಸುರಕ್ಷತೆಯ ಬಗ್ಗೆ ತಿಳುವಳಿಕೆ ನೀಡಲಾಗಿದೆ. ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ಮಾಡಲಾಗುತ್ತಿದೆ.<br>6. ಹೊಸ ವಿದ್ಯುತ್ ಮಾರ್ಗ ಮತ್ತು ಪರಿವರ್ತಕ ಕೇಂದ್ರಗಳ ನಿರ್ಮಾಣದ ಸಮಯದಲ್ಲಿ ಭಾರತೀಯ ವಿದ್ಯುಚ್ಛಕ್ತಿ ನಿಯಮಗಳನ್ವಯ ನಿಗಧಿತ ಭೂ ಅಂತರ ಹಾಗೂ ಲಂಬಾಂತರವನ್ನು ಕಾಯ್ದು ಕೊಳ್ಳಲಾಗುತ್ತಿದೆ.<br>7. ಸಾಮಾನ್ಯವಾಗಿ ಪ್ರಕೃತಿ ವಿಕೋಪದಿಂದಾಗಿ ಉಂಟಾಗಬಹುದಾದ ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಚಿತ್ರಗಳನ್ನು ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಚಾರ ಮಾಡಲಾಗಿರುತ್ತದೆ.<br>8. ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು/ಕಾಯ್ದೆಯನ್ನು ಉಲ್ಲಂಘಿಸಿ ನಿರ್ಮಿಸಿರುವ/ನಿರ್ಮಾಣ ಹಂತದಲ್ಲಿರುವ ಕಟ್ಟಡ/ಕಾಮಗಾರಿ, ವಿತರಣಾ ಮಾರ್ಗಗಳ ಕೆಳಗೆ/ಹತ್ತಿರ ಮರಗಿಡಗಳನ್ನು ಬೆಳೆಸಿರುವುದು ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ವಿತರಣಾ ಮಾರ್ಗಗಳಿಗೆ ಹಾನಿ ಮತ್ತು ಜೀವಕ್ಕೆ ಅಪಾಯ ತರುವಂತಹ ಸ್ಥಾವರಗಳನ್ನು ಗುರುತಿಸಿ, ಸಂಬಂಧಪಟ್ಟ ವಿದ್ಯುತ್ ಗ್ರಾಹಕರಿಗೆ ನೋಟೀಸ್ ನೀಡಿ, ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. |

....2

| | | |
|---|---|---|
| | | 9. ರಸ್ತೆ ಅಡ್ಡಲಾಗಿ ನಿರ್ಮಿಸಲಾದ ವಿದ್ಯುತ್ ಮಾರ್ಗಗಳು ಗಾರ್ಡಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ.<br>10. ಕಿರಿದಾದ ರಸ್ತೆಗಳಲ್ಲಿ Aerial Bunched ಕೇಬಲ್ ಗಳನ್ನು ಅಳವಡಿಸಲಾಗುತ್ತಿದೆ.<br>11. ವಿತರಣಾ ಪರಿವರ್ತಕ ಕೇಂದ್ರಗಳ ಸುತ್ತ ಸುರಕ್ಷತಾ ಬೇಲಿಯನ್ನು ಅಳವಡಿಸಲಾಗುತ್ತಿದೆ.<br>ರೇಡಿಯೋ, ದೃಶ್ಯಮಾಧ್ಯಮ ಹಾಗೂ ಶಾಲಾ-ಕಾಲೇಜುಗಳಲ್ಲಿ ಚಿತ್ರಕಲೆ/ಪ್ರಬಂಧ ಸ್ಪರ್ಧೆ ಏರ್ಪಡಿಸುವ ಮುಖಾಂತರ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. |
| ಇ) | ಕಳೆದ 03 ವರ್ಷಗಳಲ್ಲಿ ವಿದ್ಯುತ್ ಅವಘಡದಲ್ಲಿ ಮೃತಪಟ್ಟವರ/ ಗಾಯಗೊಂಡವರಿಗೆ ನೀಡಲಾಗಿರುವ ಪರಿಹಾರದ ವಿವರಗಳನ್ನು ಒದಗಿಸುವುದು; | ಕಳೆದ 03 ವರ್ಷಗಳಲ್ಲಿ ವಿದ್ಯುತ್ ಅವಘಢದಲ್ಲಿ ಮೃತಪಟ್ಟ ವ್ಯಕ್ತಿಗಳ ವಾರಸ್ಸುದಾರರಿಗೆ ಹಾಗೂ ಗಾಯಗೊಂಡವರಿಗೆ ನೀಡಲಾಗಿರುವ ಪರಿಹಾರದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಈ) | ರಾಜ್ಯ ಸರ್ಕಾರ ವಿದ್ಯುತ್ ತಂತಿಗಳನ್ನು ನೆಲದೊಳಗೆ ಅಳವಡಿಸುವ ಯೋಜನೆ ಹಮ್ಮಿಕೊಳ್ಳುತ್ತಿದೆಯೇ, ಹಾಗಿದ್ದಲ್ಲಿ, ವಿವರವನ್ನು ಒದಗಿಸುವುದು? | ರಾಜ್ಯ ಸರ್ಕಾರದಿಂದ ನೆಲದೊಳಗೆ ವಿದ್ಯುತ್ ತಂತಿಗಳನ್ನು ಅಳವಡಿಸುವ (ಭೂಗತ ಕೇಬಲ್) ಯಾವುದೇ ಯೋಜನೆಗಳು ಜಾರಿಯಲ್ಲಿರುವುದಿಲ್ಲ. ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಆಂತರಿಕ ಸಂಪನ್ಮೂಲ ಬಳಸಿ, ನಗರ ಪ್ರದೇಶಗಳಲ್ಲಿ ಹಂತ ಹಂತವಾಗಿ ಭೂಗತ ಕೇಬಲ್ ಅಳವಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ.<br>ಕೇಂದ್ರ ಸರ್ಕಾರದ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐ.ಪಿ.ಡಿ.ಎಸ್.) ಯಡಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ನೆಲದೊಳಗೆ ವಿದ್ಯುತ್ ತಂತಿಗಳನ್ನು ಅಳವಡಿಸುವ (ಭೂಗತ ಕೇಬಲ್) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿದ್ಯುತ್ ಸರಬರಾಜು ಕಂಪನಿವಾರು ಪ್ರಗತಿಯ ವಿವರಗಳು ಕೆಳಕಂಡಂತಿವೆ:- |

| ಕ್ರ ಸಂ. | ವಿದ್ಯುತ್ ಸರಬರಾಜು ಕಂಪನಿ | ಐ.ಪಿ.ಡಿ.ಎಸ್. ಯೋಜನೆ ಯಡಿಯಲ್ಲಿ ಅಳವಡಿಸಲಾಗಿರುವ ಕೇಬಲ್ ಗಳು (ಕಿ.ಮೀ.ಗಳಲ್ಲಿ) |
|---|---|---|
| 1 | ಬೆಸ್ಕಾಂ | 954.08 |
| 2 | ಮೆಸ್ಕಾಂ | 165.73 |
| 3 | ಸೆಸ್ಕ್ | 93.26 |
| 4 | ಹೆಸ್ಕಾಂ | 122.89 |
| 5 | ಜೆಸ್ಕಾಂ | 49.27 |
| | ಒಟ್ಟು | **1385.23** |

**ಸಂಖ್ಯೆ:** ಎನರ್ಜಿ 58 ಇಬಿಎಸ್ 2020

**(ಬಿ.ಎಸ್.ಯಡಿಯೂರಪ್ಪ)**
ಮುಖ್ಯಮಂತ್ರಿ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಲಹರ್ ಸಿಂಗ್ ಸಿರೋಯಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 651ಕ್ಕೆ ಅನುಬಂಧ:-**

**ಕಳೆದ 3 ವರ್ಷಗಳಲ್ಲಿ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅಪಘಾತಗಳಿಂದ ಮೃತಪಟ್ಟ ಮತ್ತು ಗಾಯಗೊಂಡ ವ್ಯಕ್ತಿಗಳ ಸಂಖ್ಯೆ ಮತ್ತು ನೀಡಲಾದ ಪರಿಹಾರದ ವಿವರಗಳು**

| ವರ್ಷ | ಮೃತಪಟ್ಟ ವ್ಯಕ್ತಿಗಳು | | ಗಾಯಗೊಂಡ ವ್ಯಕ್ತಿಗಳು | |
|---|---|---|---|---|
| | ಮೃತಪಟ್ಟ ವ್ಯಕ್ತಿಗಳ ಸಂಖ್ಯೆ | ನೀಡಲಾದ ಪರಿಹಾರದ ಮೊತ್ತ (ರೂ.ಲಕ್ಷಗಳಲ್ಲಿ) | ಗಾಯಗೊಂಡ ವ್ಯಕ್ತಿಗಳ ಸಂಖ್ಯೆ | ನೀಡಲಾದ ಪರಿಹಾರದ ಮೊತ್ತ/ (ರೂ.ಲಕ್ಷಗಳಲ್ಲಿ) |
| 2016–17 | 438 | 418.90 | 287 | 18.23 |
| 2017–18 | 428 | 368.12 | 337 | 30.69 |
| 2018–19 | 512 | 479.46 | 354 | 31.39 |
| 2019–20 (ಜನವರಿ 20ರ) | 431 | 415.52 | 258 | 20.97 |
| ಒಟ್ಟು | **1809** | **1682.00** | **1236** | **101.28** |